E-Gove-34/2020 E.NO: 394208

File No.FD/289/FR/2020-FR-FINANCE DEPT.SEC

**ಕರ್ನಾಟಕ ಸರ್ಕಾರ**

ಸಂ:ಆಇ 29 ಟಿಎಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ:19/10/2020.

1875288
3 - NOV 2020

**ಸುತ್ತೋಲೆ**

ವಿಷಯ:- ಇಲಾಖಾಗಳು ಫಲಾನುಭವಿ ಆಧಾರಿತ ಪಾವತಿಗಳನ್ನು ಇ-ಆಡಳಿತ ಇಲಾಖೆಯ DBT Platform ಮೂಲಕ ಪಾವತಿಸುವ ಕುರಿತು.

****-****

ಸರ್ಕಾರದ ಆದೇಶ ಸಂ:ಎಫ್‌ಡಿ 06 ಸಿಎಎಂ 2013, ದಿ:23.11.2016 ರ ಆದೇಶದಲ್ಲಿ ಸರ್ಕಾರವು ಎಲ್ಲಾ ಇಲಾಖೆಗಳ ಫಲಾನುಭವಿ ಆಧಾರಿತ ಕಲ್ಯಾಣ ಹಾಗೂ ಸಬ್ಸಿಡಿ ಯೋಜನೆಗಳ ಪಾವತಿಗಳನ್ನು ಫಲಾನುಭವಿಗಳ ಖಾತೆಗಳಿಗೆ ನೇರ ವರ್ಗಾವಣೆ ಮಾಡುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.(DBT) ಈ ಯೋಜನೆಯು, ಕೇಂದ್ರ ನೆರವಿನ ರಾಜ್ಯವಲಯ ಮತ್ತು ರಾಜ್ಯವಲಯದ ಯೋಜನೆಗಳ ಉದ್ದೇಶಿತ ಫಲಾನುಭವಿಗಳ ಆಧಾರ್ ಸೀಡೆಡ್ ಬ್ಯಾಂಕ್ ಖಾತೆಗಳಿಗೆ ಪ್ರಯೋಜನದ ಹಣವನ್ನು ನೇರವಾಗಿ ವರ್ಗಾಯಿಸಲಿದೆ. ಪಾವತಿಗಳನ್ನು ಆಧಾರ್ ಆಧಾರಿತ Platform ಮೂಲಕ ಸಕ್ರಿಯಗೊಳಿಸಬೇಕಾಗಿದ್ದು, ಇದಕ್ಕಾಗಿ ಖಜಾನೆ-2 ನ್ನು ಬಳಸಬಹುದಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಸರ್ಕಾರದ ಸುತ್ತೋಲೆ ಸಂ:ಆಇ 25 ಟಿಎಆರ್ 2019, ದಿ:27.08.2019 ರ ಸುತ್ತೋಲೆಯಲ್ಲಿ ಖಜಾನೆ-2 ರ BMS ಮಾಡ್ಯೂಲ್‌ನಲ್ಲಿ ಫಲಾನುಭವಿಗಳ ಖಾತೆಗೆ ನೇರ ವರ್ಗಾವಣೆ ಮಾಡುವ ವ್ಯವಸ್ಥೆ(DBT) ಪಾವತಿಸುವ ಪಾವತಿಗಳ ನಿರ್ವಹಣೆ ಕುರಿತು ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.

ಸರ್ಕಾರದ ಆದೇಶ ಸಂ:ಆಇ 7 ಟಿಎಆರ್ 2019, ದಿ:24.07.2019 ರ ಆದೇಶದಲ್ಲಿ ಇನ್ನು DBT ವ್ಯವಸ್ಥೆ ಜಾರಿಯಾಗದ/DBT ವ್ಯವಸ್ಥೆ ಜಾರಿಗೊಳ್ಳುವವರೆಗೆ ರಾಜ್ಯ/ಜಿಲ್ಲಾ ವಲಯಗಳ ಯೋಜನೆಗಳಿಗೆ ಸಂಬಂಧಿಸಿದಂತೆ, ಹೆಚ್ಚಿನ ಫಲಾನುಭವಿಗಳನ್ನು ಹೊಂದಿರುವ ಯೋಜನೆಗಳ (Beneficiary Oriented Scheme) ಫಲಾನುಭವಿಗಳ ಪಾವತಿಗಳನ್ನು ನಿರ್ವಹಿಸಲು ಖಜಾನೆ-2 ರಲ್ಲಿ ಫಲಾನುಭವಿಯ ನಿರ್ವಹಣಾ ವ್ಯವಸ್ಥೆಯನ್ನು (BMS) ಜಾರಿಗೊಳಿಸಲಾಗಿದೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಇ-ಆಡಳಿತ) ಇವರ ಅಧ್ಯಕ್ಷತೆಯಲ್ಲಿ ದಿ:20.06.2020 ರಂದು ನಡೆದ ಸಭೆಯಲ್ಲಿ ಕೆಲವು ಯೋಜನೆಗಳಿಗೆ ಸಂಬಂಧಿಸಿದಂತೆ ಇಲಾಖೆಗಳು ನೇರವಾಗಿ ಖಜಾನೆ-2 BMS ಮೂಲಕ ಪಾವತಿಸಲು ಖಜಾನೆಯನ್ನು ಸಂಪರ್ಕಿಸುತ್ತಿದ್ದು, ಸದರಿಯವರು ಈ ಹಿಂದೆ ಡಿಬಿಟಿ ಮೂಲಕ

ಇ-ಆಡಳಿತ

File No.FD/289/FR/2020-FR-FINANCE DEPT.SEC

ಪಾವತಿಸಿರುವ ಅಥವಾ ಇಲ್ಲದಿರುವ ಬಗ್ಗೆ ಇ-ಆಡಳಿತ ಇಲಾಖೆಗೆ ಯಾವುದೇ ಮಾಹಿತಿ ಇರುವುದಿಲ್ಲವೆಂದು, ಇದರಿಂದಾಗಿ ಫಲಾನುಭವಿಗಳ ಗುರುತು ಹಾಗೂ ಪಾವತಿಗಳ ಕುರಿತು ಖಾತರಿಪಡಿಸಿಕೊಳ್ಳುವುದು ಕಷ್ಟಸಾಧ್ಯವಾಗಿರುವುದಾಗಿ, ಖಜಾನೆ ಆಯುಕ್ತರು ತಿಳಿಸಿರುತ್ತಾರೆ.

ಆದ್ದರಿಂದ, ಇಲಾಖೆಗಳು ವಿವಿಧ ಯೋಜನೆಗಳ ಫಲಾನುಭವಿ ಆಧಾರಿತ ಪಾವತಿಗಳನ್ನು ಇ-ಆಡಳಿತ ಇಲಾಖೆಯ DBT Plat Form ಮೂಲಕ ಪಾವತಿಸಲು ಮೊದಲಿಗೆ ಸಿ.ಆ.ಸು.ಇ(ಇ-ಆಡಳಿತ) ರವರನ್ನು ಸಂಪರ್ಕಿಸಿ, ಯಾವುದೇ ತಾಂತ್ರಿಕ ಸಮಸ್ಯೆಗಳಿದ್ದಲ್ಲಿ ಮತ್ತು ಸಮಸ್ಯೆ ಪರಿಹಾರವಾಗುವವರೆಗೆ ಮಾತ್ರ ಇ-ಆಡಳಿತ ಇಲಾಖೆಯಿಂದ ಲಿಖಿತ ಮಾಹಿತಿ ಪಡೆದು ಖಜಾನೆ ಆಯುಕ್ತರಿಗೆ ಸಲ್ಲಿಸುವ ಮೂಲಕ ಖಜಾನೆ-2 ರ BMS ಮಾಡ್ಯೂಲ್ ನಲ್ಲಿ ಪಾವತಿಸಲು ತಿಳಿಸಲಾಗಿದೆ.

ಒಂದು ವೇಳೆ ಇಲಾಖಾ ಡಿ.ಡಿ.ಓ. ಗಳು ಇ-ಆಡಳಿತ ಮಾಹಿತಿ ನೀಡದೇ ಖಜಾನೆ-2ರ BMS ಮಾಡ್ಯೂಲ್ ನಲ್ಲಿ ಅಥವಾ ಖಜಾನೆಗೆ ಮಾಹಿತಿ ನೀಡದೇ Plat Form ಮೂಲಕ ಪಾವತಿಸುವುದು/ಪಾವತಿಸಿರುವುದರಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾದಲ್ಲಿ ಅಂತಹ ಇಲಾಖಾ/ಕಛೇರಿಯ ಡಿಡಿಓ ಗಳನ್ನೇ ಜವಾಬ್ದಾರರನ್ನಾಗಿ ಮಾಡುವಂತೆ ಎಲ್ಲಾ ಇಲಾಖೆಗಳಿಗೆ ಈ ಮೂಲಕ ತಿಳಿಸಿದೆ.

19.10.2020

(ಹೆಚ್.ಎ. ಶೋಭ)

ಸರ್ಕಾರದ ಉಪ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ).

**ಪ್ರತಿಗಳು:-**

1. ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.
2. ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಇ-ಆಡಳಿತ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಆಯುಕ್ತರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7. ಅಪರ ನಿರ್ದೇಶಕರು, ಟಿಎನ್‌ಎಂಸಿ ಖನಿಜ ಭವನ, ಬೆಂಗಳೂರು.
8. ಎಲ್ಲಾ ಜಿಲ್ಲಾ ಪಂಚಾಯತ್‌ಗಳು, ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು.
9. ಎಲ್ಲಾ ಜಿಲ್ಲಾ ಖಜಾನೆಗಳಾಧಿಕಾರಿಗಳು - ಖಜಾನೆ ಆಯುಕ್ತರ ಮುಖಾಂತರ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.